	93	ಶಿರಹಟ್ಟಿ
ರೋಣ	94	ಯಾವಗಲ್
	95	ನಿಡಗುಂದಿ
ಗದಗ್	96	ಕುರ್ತಕೋಟಿ
	97	ಹಿರೇಹಾಳ
ಮುಂಡರಗಿ	98	ಡೋಣಿ
	ಉತ್ತರ ಕನ್ನಡ ಜಿಲ್ಲೆ	
ಕುಮಟಾ		--
ಹಳಿಯಾಳ	99	ತೇರ್‌ಗಾಂವ್
ಶಿರಸಿ		--
ಹೊನ್ನಾವರ		--
ಭಟ್ಕಳ		--
ಜೋಯ್ಡಾ	100	ಜೋಯ್ಡಾ
ಅಂಕೋಲಾ		--
ಕಾರವಾರ		--
ಮುಂಡಗೋಡು		--
ಸಿದ್ದಾಪುರ	101	ಕೋಲ್‌ಸಿರಸಿ
ಯಲ್ಲಾಪುರ		--

592 (803) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ॥ ನಂಜುಂಡಪ್ಪರವರ ವರದಿಯ ಪ್ರಕಾರ ಗೌರಿಬಿದನೂರು ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ಎಂದು ಗುರುತಿಸಿರುವುದು ನಿಜವಲ್ಲವೇ;

ಆ) ಹಾಗಾದರೆ, ಬಹಳ ವರ್ಷಗಳಿಂದ ಈ ಭಾಗದ ಬೇಡಿಕೆಯಾಗುವ ಪಾಲಿಟೆಕ್ನಿಕ್ ಕಾಲೇಜು ಸ್ಥಾಪನೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯವಲ್ಲವೇ;

ಇ) ಪ್ರಸಕ್ತ ಸಾಲಿನಲ್ಲಿಯಾದರೂ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡುವಲ್ಲಿ ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ, ಇ) ಡಾ॥ ನಂಜುಂಡಪ್ಪನವರ ವರದಿ ಮೇರೆಗೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ಗೌರಿಬಿದನೂರಿನಲ್ಲಿ ವೃತ್ತಿಪರ ಹಾಗೂ ತಾಂತ್ರಿಕ ಮಹಾವಿದ್ಯಾಲಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಅಸಮತೋಲನವನ್ನು ಸರಿಪಡಿಸುವ ನಿಟ್ಟಿನಲ್ಲಿ ಮುಂಬರುವ ವರ್ಷಗಳಲ್ಲಿ ಆಯವ್ಯಯ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಗೌರಿಬಿದನೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಕುರಿತು ಪರಿಶೀಲಿಸಲಾಗುವುದು.

593 (804) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

01) 2007-08ನೇ ಸಾಲಿನಲ್ಲಿ 100 ಪ್ರೌಢಶಾಲೆಗಳು ಹೊಸದಾಗಿ ಮಂಜೂರು ಮಾಡಿರುವುದು ನಿಜವಲ್ಲವೇ;

02) ಈ ಸಾಲಿನಲ್ಲಿ ಅತೀ ಹಿಂದುಳಿದ ತಾಲ್ಲೂಕಾದ ಗೌರಿಬಿದನೂರು ತಾಲ್ಲೂಕನ್ನು ಕಡೆಗಣಿಸಿ ಒಂದೂ ಹೊಸ ಪ್ರೌಢಶಾಲೆಯನ್ನು ಮಂಜೂರು ಮಾಡದೇ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

03) ಈ ತಾಲ್ಲೂಕನ್ನು ಡಾ॥ ನಂಜುಂಡಪ್ಪನವರು ಅತೀ ಹಿಂದುಳಿದ ತಾಲ್ಲೂಕೆಂದು ವರದಿ ನೀಡಿದ್ದರೂ ಸಹ ಸರ್ಕಾರವು ತಾರತಮ್ಯ ನೀತಿಯನ್ನು ಅನುಸರಿಸಿರುವುದು ಎಷ್ಟರ ಮಟ್ಟಿಗೆ ಸಮಂಜಸವಾಗಿದೆ;

04) ಗೌರಿಬಿದನೂರು ತಾಲ್ಲೂಕಿನ ಬಿ.ಬೊಮ್ಮಸಂದ್ರ ಗೂಯ್ಯಲಹಳ್ಳಿಗಳಲ್ಲಿ ಪ್ರೌಢಶಾಲೆಗಳು ಇಲ್ಲದೇ ಬಡ ವಿದ್ಯಾರ್ಥಿಗಳು ಯಾತನೆಯನ್ನು ಅನುಭವಿಸುತ್ತಿದ್ದು, ಸರ್ಕಾರವು ಕೂಡಲೇ ಗಮನ ಹರಿಸಿ, ತಾರತಮ್ಯ ನೀತಿಯನ್ನು ಬಿಟ್ಟು, ಹೊಸದಾಗಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವಲ್ಲಿ ಕ್ರಮ ಕೈಗೊಳ್ಳುವುದೇ?